ದಿನಾಂಕಃ 11-07-2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಹೆಚ್.ಟಿ.ಎಸ್.ಕೆ. ವಕೀಲರಿಂದಃ ಆರೋಪಿಯ ಪರವಾಗಿಃ

6. ಫ್ರಾಸಾ--8 ರವರು ನನಗೆ ಚಿಕ್ಕಂದಿನಿಂದಲೂ ಪರಿಚಯ ಇರುತ್ತಾರೆ. ಆತ ನನ್ನ ಸಂಬಂದಿ ಮತ್ತು ಆತ ಈಗ್ಗೆ 7

ವರ್ಷಗಳಿಂದ ನಮ್ಮ ಮನೆಯಲ್ಲಿಯೇ ಉಳಿದುಕೊಂಡಿದ್ದಾನೆ.ಆತ ನಮ್ಮ ಮನೆಗೆ ಬಂದಾಗ ಟಿ.ಎಂ.ಎಸ್. ಕಾಲೇಜಿನಲ್ಲಿ ಪದವಿ ವ್ಯಾಸಂಗ ಮಾಡುತ್ತಿದ್ದನು, ಆದರೆ ಯಾವ ವರ್ಷದ ಪದವಿ ಎಂದು ನನಗೆ ಗೊತ್ತಿಲ್ಲ. ಫ್ರಾಸಾ-1 ರವರು ಫ್ರಾಸಾ-8 ರವರೊಂದಿಗೆ ನಮ್ಮ ಮನೆಗೆ ಆಗಾಗ್ಗೆ ಬರುತ್ತಿದ್ದರು ಮತ್ತು ಒಟ್ಟಿಗೆ ಓದಿಕೊಳ್ಳುತ್ತಿದ್ದರು ಹಾಗಾಗಿ ಆತನ ಪರಿಚಯ ಇದೆ. ಎಷ್ಟನೇ ಇಸವಿಯಲ್ಲಿ ಫ್ರಾಸಾ-8 ರವರು ನಿಮ್ಮ ಮನೆಗೆ ವಾಸಕ್ಕೆಂದು ಬಂದಿದ್ದರು ಎಂದರೆ ಸಾಕ್ಷಿ ಈಗ ನನಗೆ ನೆನಪಿಲ್ಲ ಎನ್ನುತ್ತಾರೆ. ನಿಮ್ಮ ಮನೆಯಲ್ಲಿ ಎಷ್ಟು ಜನ ವಾಸವಾಗಿದ್ದೀರಿ ಎಂದರೆ ಸಾಕ್ಷಿಯು ಒಟ್ಟು 8 ಜನ, ಅವರೆಂದರೆ ನಮ್ಮ ಸಂಬಂದಿಕರ ಮೂರು ಜನ ಮಕ್ಕಳು ಮತ್ತು ನನ್ನ ಕುಟುಂಬದವರು. ಫ್ರಾಸಾ-8 ರವರ ತಂದೆಯ ಹೆಸರು ವಿಜೇಂದ್ರ ಗೌಡ ಮತ್ತು ತಾಯಿ ಹೆಸರು ಭಾರತಿ. ಅವರು ಕುಂದೂರಿನ ವಾಸಿಗಳು. ಫ್ರಾಸಾ-8 ರವರನ್ನು ಹೊರತು ಪಡಿಸಿ ನಮ್ಮ ಮನೆಯಲ್ಲಿ ಇದ್ದ ಇನ್ನೂ ಇಬ್ಬರು ಮಕ್ಕಳು ನನ್ನ ಗಂಡನ ಅಕ್ಕನ ಮಕ್ಕಳು. ಫ್ರಾಸಾ-8 ರವರು ನಮ್ಮ ಮನೆಯಲ್ಲಿ ಉಳಿದುಕೊಳ್ಳಲು ನನಗೆ ತಿಂಗಳಿಗೆ 4 ಸಾವಿರ ಹಣವನ್ನು ಕೊಡುತ್ತಿದ್ದರು. ದಿನಾಂಕಃ 23.09.2021 ರಂದು ನಿಮಗೆ ಆರೋಗ್ಯ ಸರಿ ಇರಲಿಲ್ಲವೆಂದು ಹೇಳಿದ್ದೀರಿ ಆ ಸಮಯದಲ್ಲಿ ಫ್ರಾಸಾ-8 ರವರು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ಆತ ಮುತ್ತೂಟ್

ಮೈಕ್ರೊ ಫೈನಾನ್ಸ್‌ನಲ್ಲಿ ಕೆಲಸ ಮಾಡುತ್ತಿದ್ದನು ಎನ್ನುತ್ತಾರೆ. ಆ ದಿನ ಪ್ರಾಸಾ-8 ರವರು ನಿಮ್ಮ ಮನೆಯಿಂದ ಎಷ್ಟು ಗಂಟೆಗೆ ಮನೆಯಿಂದ ಹೊರಗೆ ಹೋಗಿದ್ದರು, ಎಂದರೆ ಸಾಕ್ಷಿಯು ನನಗೆ ಹುಷಾರಿಲ್ಲದ ಕಾರಣ ಮಲಗಿದ್ದೆನು ಹಾಗಾಗಿ ಸಮಯ ನಿರ್ಧಿಷ್ಟವಾಗಿ ಗೊತ್ತಿಲ್ಲ. ಆ ದಿನ ಪ್ರಾಸಾ-8 ರವರು ಕೆಲಸಕ್ಕೆ ಹೋಗಿರಲಿಲ್ಲ. ಆ ದಿನ ನೀವು ಪ್ರಾಸಾ-8 ರವರಿಗೆ ಪೋನ್ ಮಾಡಿದ್ದಾಗಿ ಹೇಳಿದ್ದೀರಿ ಆ ರೀತಿ ನೀವು ಕರೆ ಮಾಡಿದ ಮೊಬೈಲ್ ಸಂಖ್ಯೆ ಎಷ್ಟು ಎಂದರೆ ಸಾಕ್ಷಿ ನನಗೆ ಈಗ ನೆನಪಿಲ್ಲ ಎನ್ನುತ್ತಾರೆ. ನಾನು ಪ್ರಾಸಾ-8 ರವರಿಗೆ ಕರೆ ಮಾಡಿದಾಗ ಸಮಯ ಬೆಳಗ್ಗೆ 11.30 ಗಂಟೆ ಸಮಯ ಆಗಿತ್ತು. ನಾನು ಕರೆ ಮಾಡಿದ 5 ರಿಂದ 10 ನಿಮಿಷಗಳಲ್ಲಿ ಪ್ರಾಸಾ-8 ರವರು ನಮ್ಮ ಮನೆಗೆ ಬಂದರು. ನಂತರ ನಾನು ಮತ್ತು ನನ್ನ ಮಗಳು ಆಟೋದಲ್ಲಿ ಆಸ್ಪತ್ರೆಗೆ ಹೊರೆಟೆವು ಮತ್ತು ಪ್ರಾಸಾ-1 ಮತ್ತು ಪ್ರಾಸಾ-8 ರವರು ಬೈಕ್ ನಲ್ಲಿ ಬಂದರು. ನಿಮ್ಮನ್ನು ಪರೀಕ್ಷಿಸಿದ ವೈಧ್ಯರ ಹೆಸರು ಏನು ಎಂದರೆ ಸಾಕ್ಷಿಯು ಸಹದೇವ್ ಎನ್ನುತ್ತಾರೆ. ಪ್ರಾಸಾ-1 ಮತ್ತು ಪ್ರಾಸಾ-8 ರವರು ಆಸ್ಪತ್ರೆಯಲ್ಲಿ ನನ್ನೊಂದಿಗೆ ಎಷ್ಟು ಹೊತ್ತಿನ ವರೆಗೆ ಇದ್ದರು ಎಂದರೆ ಸಾಕ್ಷಿಯು ಸಂಜೆ 5.00 ರಿಂದ 5.30 ಗಂಟೆ ಯವರೆಗೂ ಇದ್ದರು ಎನ್ನುತ್ತಾರೆ. ಆ ದಿನ ಪ್ರಾಸಾ-8 ರವರು ನನಗೆ ಪೋನ್ ಮಾಡಿ ಯಾವುದೇ ವಿಚಾರವನ್ನು ತಿಳಿಸಿಲ್ಲ ಆದರೆ ಮಾರನೇ ದಿನ ಪೋನ್ ಮಾಡಿ ತಿಳಿಸಿದರು. ದಿನಾಂಕಃ

07.10.2021 ರಂದು ನಾನು ಪೊಲೀಸರಿಗೆ ಡಿಸ್ಚಾರ್ಜ್ ಸಮ್ಮರಿಯನ್ನು ಕೊಟ್ಟಿದ್ದೇನೆ ಮತ್ತು ನನಗೆ ಗೊತ್ತಿದ್ದ ಮಾಹಿತಿಯನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ. ಆರೋಪಿಯನ್ನು ನಾನು ಈ ಹಿಂದೆ ನೋಡಿಲ್ಲ ಮತ್ತು ಆತನ ಬಗ್ಗೆ ಪ್ರಾಸಾ-1 ರವರು ನನಗೆ ಯಾವುದೇ ವಿಚಾರವನ್ನು ತಿಳಿಸಿರಲಿಲ್ಲ.

7. ದಿನಾಂಕ 23.09.2021 ರಂದು ನನಗೆ ಆರೋಗ್ಯ ಸರಿ ಇರಲಿಲ್ಲ ಹಾಗಾಗಿ ಬೆಳಿಗ್ಗೆ 11.30 ಗಂಟೆ ಸುಮಾರಿಗೆ ಪ್ರಾಸಾ.8 ರವರಿಗೆ ಫೋನ್ ಮಾಡಿ ನನಗೆ ಹುಷಾರಿಲ್ಲ ಬಂದು ಆಸ್ಪತ್ರೆಗೆ ಕರೆದುಕೊಂಡು ಹೋಗು ಎಂದು ಹೇಳಿದ್ದಾಗಿ, ಆಗ ಪ್ರಾಸಾ.8 ಮತ್ತು ಆತನ ಸ್ನೇಹಿತನಾದ ಪ್ರಾಸಾ.1 ರವರು ನಮ್ಮ ಮನೆಗೆ ಬಂದು ನನ್ನನ್ನು ಚಿಕ್ಕಮಗಳೂರಿನ ಹೋಲಿಕ್ರಾಸ್ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಸದರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿ 2 ದಿನಗಳ ಕಾಲ ಚಿಕಿತ್ಸೆಯನ್ನು ಪಡೆದುಕೊಂಡಿದ್ದೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ದಿನ ಅಂದರೆ ದಿನಾಂಕ 23.09.2021 ರಂದು ಪ್ರಾಸಾ.1 ಮತ್ತು ಪ್ರಾಸಾ.8 ರವರು ಸಂಜೆ 5.00 ಗಂಟೆಯವರೆಗೆ ನನ್ನೊಂದಿಗೆ ಸದರಿ ಆಸ್ಪತ್ರೆಯಲ್ಲಿ ಇದ್ದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ಪ್ರಾಸಾ.8 ರವರು ಪ್ರಾಸಾ.1 ರವರನ್ನು ಬಿಟ್ಟು ಬರುವುದಾಗಿ ಹೇಳಿ ಹೋದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

8. ಮಾರನೇ ದಿನ ಫ್ರಾಸಾ.8 ರವರು ನನ್ನನ್ನು ನೋಡಲು ಸದರಿ ಆಸ್ಪತ್ರೆಗೆ ಬಂದಿದ್ದಾಗಿ, ಆಗ ಫ್ರಾಸಾ.8 ರವರು ನನಗೆ ಆರೋಪಿ ಆತನ ತಾಯಿಯನ್ನು ಕೊಲೆ ಮಾಡಿರುವುದಾಗಿ ತಿಳಿಸಿದನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ದಿನಾಂಕ 07.10.2021 ರಂದು ಬಸವನಹಳ್ಳಿ ಪೊಲೀಸರು ನನ್ನನ್ನು ಕರೆಸಿ ದಿನಾಂಕ 23.09.2021 ರಂದು ಫ್ರಾಸಾ.1 ರವರು ನಿಮ್ಮ ಜೊತೆ ಇದ್ದರೇ ಎಂದು ಕೇಳಿದರು ಮತ್ತು ನಾನು ಆ ದಿನ ಹೋಲಿಕ್ರಾಸ್ ಆಸ್ಪತ್ರೆಗೆ ದಾಖಲಾಗಿದ್ದ ಬಗ್ಗೆ ದಾಖಲೆಯನ್ನು ಕೇಳಿದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆಗ ನಾನು ಪೊಲೀಸರಿಗೆ ದಿನಾಂಕ 23.09.2021 ರಂದು ಮೇಲೆ ಹೇಳಿದಂತೆ ಫ್ರಾಸಾ.1 ರವರು ಫ್ರಾಸಾ.8 ರವರೊಂದಿಗೆ ನಮ್ಮ ಮನೆಗೆ ಬಂದು ನನ್ನನ್ನು ಹೋಲಿಕ್ರಾಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿದ್ದ ಬಗ್ಗೆ ತಿಳಿಸಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಸದರಿ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದುಕೊಂಡಿದ್ದ ಬಗ್ಗೆ ಸದರಿ ಆಸ್ಪತ್ರೆಯವರು ನೀಡಿದ ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

9. ದಿನಾಂಕ 07.10.2021 ರಂದು ನಾನು ಪೊಲೀಸರಿಗೆ ಮೇಲೆ ಹೇಳಿದಂತೆ ನನಗೆ ತಿಳಿದಿದ್ದ ಮಾಹಿತಿಯನ್ನು ತಿಳಿಸಿ ಹೇಳಿಕೆಯನ್ನು ನೀಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ಯಾವುದೇ ಅನುಮತಿಯನ್ನು ಪಡೆಯದೇ ಪಿ.ಜಿಯನ್ನು ನೆಡೆಸುತ್ತಿದ್ದೀರಿ ಎಂದರೆ ಸರಿಯಲ್ಲ. ಆ

ಕಾರಣಕ್ಕೆ ಪೊಲೀಸರ ಮಾತು ಕೇಳಿ ಅವರು ಹೇಳಿಕೊಟ್ಟಂತೆ ಸುಳ್ಳು ಸಾಕ್ಷಿ ನುಡಿದಿದ್ದೀರಿ ಎಂದರೆ ಸರಿಯಲ್ಲ. ಪ್ರಾಸಾ-1 ರವರು ನಿಮ್ಮೊಂದಿಗೆ ಅನ್ಯೋನ್ಯವಾಗಿದ್ದು ಆತ ಆರೋಪಿಗೆ ಮಾನಸಿಕ ಸ್ಥಿತಿ ಸರಿಇಲ್ಲವೆಂದು ನಿಮಗೆ ತಿಳಿಸಿದ್ದನು ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ